

# ಪೇಸ್ ನಿವೃತ್ತಿ

ಟೋಕಿಯೊ ಬೇಸಿಗೆ ಒಲಿಂಪಿಕ್ಸ್ ಜುಲೈ ಕೊನೆಯ ವಾರದಿಂದ ಆಗಸ್ಟ್ ಮೊದಲ ವಾರದವರೆಗೆ ನಡೆಯಲಿದೆ. 'ಒಲಿಂಪಿಕ್ಸ್ ಬಳಿಕ ನಾನು ವೃತ್ತಿಪರ ಟೆನಿಸ್‌ನಿಂದ ನಿವೃತ್ತಿಯಾಗುತ್ತೇನೆ' ಎಂದು ಲಿಯಾಂಡರ್ ಪೇಸ್ ಘೋಷಣೆ ಹೊರಬಿದ್ದಿದೆ. ಕ್ರಿಸ್ಮಸ್ ಹಬ್ಬದ ಸಂಭ್ರಮದಲ್ಲಿದ್ದ ಅಭಿಮಾನಿಗಳಿಗಂತೂ ನಿರಾಶೆಯಾಗಿದೆ. ಲಿಯಾಂಡರ್ ಒಲಿಂಪಿಕ್ಸ್‌ನಲ್ಲಿ ಆಡುವ ತಂಡಕ್ಕೆ ಆಯ್ಕೆ ಆಗಬಹುದೇ? ಗೊತ್ತಿಲ್ಲ. ಏಕೆಂದರೆ ಒಲಿಂಪಿಕ್ಸ್‌ನಲ್ಲಿ ಭಾರತದ ಡಬಲ್ಸ್ ತಂಡಕ್ಕೆ ಈಗ ಅತ್ಯುತ್ತಮ ಫಾರ್ಮ್‌ನಲ್ಲಿರುವ ಮಹೇಶ್ ಭೂಪತಿ ಮತ್ತುದಿವಿಜ್ ಶರ್ಮಾ ಜೋಡಿ ಆಯ್ಕೆ ಆಗುವುದು ಖಚಿತ. ಈ ಹಿಂದೆ ಒಲಿಂಪಿಕ್ಸ್‌ಗೆ ಎರಡನೇ ತಂಡ ಕಳುಹಿಸಿದಂತೆ ಈ ಸಲವೂ ಕಳುಹಿಸಿದರೆ ಲಿಯಾಂಡರ್‌ಗೆ ಆಡಲು ಅವಕಾಶ ಸಿಗಬಹುದು. ಈ ಸಾಧ್ಯತೆಯನ್ನು ಜೀವಂತ ಇಡಲಿಕ್ಕೆಂದೇ ಪೇಸ್ ನಿವೃತ್ತಿಯ ಘೋಷಣೆ ಮಾಡಿರುವ ಸಾಧ್ಯತೆಯೂ ಇದೆ.

ಅದೇನೇ ಇರಲಿ, ಭಾರತದ ಟೆನಿಸ್‌ನ ಸಾರ್ವಕಾಲಿಕ ಡಬಲ್ಸ್ ಶ್ರೇಷ್ಠ ಆಟಗಾರನೀತ ಎನ್ನುವುದರಲ್ಲಿ ಎರಡು ಮಾತಿಲ್ಲ. ಪೇಸ್ ಮತ್ತು ಮಹೇಶ್ ಭೂಪತಿಯ ಜೋಡಿ ಭಾರತದ ಟೆನಿಸನ್ನು ಹೊಸ ಎತ್ತರಕ್ಕೆ ಒಯ್ದದ್ದನ್ನು ಯಾರೂ ಅಲ್ಲಗಳೆಯಲಾಗದು. 1999ರಲ್ಲಿ ಪೇಸ್–ಭೂಪತಿ ಜೋಡಿ ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಮ್‌ಗಳ ಡಬಲ್ಸ್ ಫೈನಲ್ಸ್ ತಲುಪಿತ್ತು. ನಾಲ್ಕರಲ್ಲಿ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿಯನ್ನು ಈ ಜೋಡಿ ಬಗಲಿಗೆ ಹಾಕಿಕೊಂಡಿತ್ತು. ಆಗ ಈ ಜೋಡಿ ಡಬಲ್ಸ್‌ನಲ್ಲಿ ವಿಶ್ವದ 'ನಂಬರ್ ಒನ್' ರ್‍ಯಾಂಕ್ ಪಡೆದಿತ್ತು. ಡೇವಿಸ್ ಕಪ್‌ನಲ್ಲಿ ಈ ಜೋಡಿ 24 ಸತತ ವಿಜಯ ಗಳಿಸಿದ್ದೂ ದಾಖಲೆ. ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಎಂಟು ಡಬಲ್ಸ್ ಮತ್ತು 10 ಮಿಕ್ಸೆಡ್ ಡಬಲ್ಸ್ ಪ್ರಶಸ್ತಿ ಗೆದ್ದಿರುವ ಕೀರ್ತಿ ಲಿಯಾಂಡರ್ ಮುಡಿಯಲ್ಲಿದೆ. ಡೇವಿಸ್ ಕಪ್ ಡಬಲ್ಸ್‌ನಲ್ಲಿ 44 ಸಲ ಟೈಟಲ್ ಗೆದ್ದಿರುವುದೂ ದಾಖಲೆಯೇ.

ಪೇಸ್‌ಗೀಗ ವಯಸ್ಸು 46. ಹಿಂದೆ 40 ದಾಟಿದಾಗಲೇ ನಿವೃತ್ತಿಯ ಬಗ್ಗೆ ಚರ್ಚೆ ನಡೆದಿತ್ತು. ಅತ್ಯುತ್ತಮ ದೈಹಿಕ ಫಿಟ್‌ನೆಸ್ ಬೇಡುವ ಟೆನಿಸ್‌ನಲ್ಲಿ ಸಾಮಾನ್ಯವಾಗಿ 30/35ರ ಆಸುಪಾಸಿನಲ್ಲೇ ಸ್ಟಾರ್‌ಗಳೆಲ್ಲ ನಿವೃತ್ತಿ ಆಗುವುದು ಸಾಮಾನ್ಯ. ಒಬ್ಬ ರೋಜರ್ ಫೆಡರರ್ ಇದಕ್ಕೆ ಅಪವಾದ ಅನ್ನಬಹುದು.30 ವರ್ಷಗಳಿಂದ ಸತತವಾಗಿ ವೃತ್ತಿಪರ ಟೆನಿಸ್ ಆಡುತ್ತಿರುವ ಪೇಸ್, ಈ ವಯಸ್ಸಲ್ಲಿ ನಿವೃತ್ತಿ ಘೋಷಿಸಿಯೂ ಟೆನಿಸ್ ಲೋಕದಲ್ಲಿ ಸಂಚಲನ ಮೂಡಿಸಿರುವುದು ಹೆಗ್ಗಳಿಕೆಯೇ.

1991ರಲ್ಲಿ ವೃತ್ತಿಪರ ಆಟಗಾರ ಆಗುವುದಕ್ಕಿಂತ ಮುಂಚೆಯೇ ಜೂನಿಯರ್ ವಿಂಬಲ್ಡನ್ ಮತ್ತು ಜೂನಿಯರ್ ಯುಎಸ್ ಓಪನ್ ಪ್ರಶಸ್ತಿ ಗೆದ್ದು ಇಡೀ ಜಗತ್ತೇ ಕಣ್ಣರಳಿಸಿ ನೋಡುವಂತೆ ಮಾಡಿದ ಮೋಡಿಗಾರ ಪೇಸ್.1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಖ್ಯಾತ ಟೆನಿಸಿಗ ಫರ್ನಾಂಡೊ ಮೆಲಿಗೆನಿಯನ್ನು ಸೋಲಿಸಿ ಕಂಚು ಗೆದ್ದದ್ದು ಭಾರತೀಯರು ಖುಷಿಪಟ್ಟ ಸಂಗತಿ. ಅದೇ ವರ್ಷ ಭಾರತ ಸರ್ಕಾರವು ಪ್ರತಿಷ್ಠಿತ 'ರಾಜೀವ್ ಗಾಂಧಿ ಖೇಲ್ ರತ್ನ' ಪ್ರಶಸ್ತಿ ನೀಡಿತು. 1998ರಲ್ಲಿ ಪೈಲಟ್ ಪೆನ್ ಅಂತರರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಗಿನ ವಿಶ್ವ ಚಾಂಪಿಯನ್ ಪೀಟ್ ಸಾಂಪ್ರಾಸ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿದ್ದು ದೊಡ್ಡ ಸುದ್ದಿ.

1989ರಲ್ಲಿ ಆಸ್ಟ್ರೇಲಿಯನ್ ಓಪನ್ ಟೂರ್ನಿಗೆ ಚೊಚ್ಚಲ ಪ್ರವೇಶ ಪಡೆದಾತ ಪೇಸ್. ಈ ವರ್ಷವೂ ಜನವರಿ 20ರಿಂದ ಆರಂಭವಾಗಲಿರುವ ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡುತ್ತಿದ್ದಾನೆಂದರೆ ಈತನ ಫಿಟ್‌ನೆಸ್ ಕ್ಷಮತೆಗೆ ಅಚ್ಚರಿ ಪಡದೆ ಇರಲು ಸಾಧ್ಯವೇ ಇಲ್ಲ. ಫೆಬ್ರುವರಿಯಲ್ಲಿ (17–29) ದುಬೈ ಡ್ಯೂಟಿಫ್ರೀ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿರುವ ಪೇಸ್‌ಗೆ ಅಲ್ಲಿ ಬಹುದೊಡ್ಡ ಅಭಿಮಾನಿ ಬಳಗವಿದೆ. ಮಾರ್ಚ್‌ನಲ್ಲಿ ಡೇವಿಸ್ ಕಪ್‌ನಲ್ಲಿ ಆಡುವುದು ಖಚಿತ. ಜುಲೈನಲ್ಲಿ ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಹೊಂದಿದರೆ ಎಂಟನೇ ಸಮ್ಮರ್ ಒಲಿಂಪಿಕ್ಸ್ ಆಡಿದಂತೆ. ಯಾವುದೇ ಅಥ್ಲೀಟ್ ಮಟ್ಟಿಗೆ ಇದೊಂದು ದಾಖಲೆಯೇ!

ಪೇಸ್‌ಗೆ ವಯಸ್ಸಾಗಿದೆ ಎಂದು ದೂರುವವರಿಗೆಲ್ಲ ಆಟದ ಮೂಲಕ ಉತ್ತರ ಕೊಡುತ್ತಿರುವುದು ಪೇಸ್ ಹೆಚ್ಚುಗಾರಿಕೆ. ಆದರೆ ಕಳೆದ 2–3 ವರ್ಷಗಳಲ್ಲಿ ದೊಡ್ಡ ಟೂರ್ನಿಗಳನ್ನು ಗೆದ್ದ ಉದಾಹರಣೆ ಇಲ್ಲ.2015ರ ವಿಂಬಲ್ಡನ್‌ನಲ್ಲಿ ಮಾರ್ಟಿನಾ ಹಿಂಗಿಸ್ ಜೊತೆಗೆ ಮಿಕ್ಸೆಡ್ ಡಬಲ್ಸ್ ಫೈನಲ್ ಗೆದ್ದದ್ದು ಇತ್ತೀಚಿನ ದೊಡ್ಡ ಬೇಟೆ! ಆಗ ಪೇಸ್ ವಯಸ್ಸು 41 ದಾಟಿದ್ದರೂ 30ರ ಜೋಡಿಗಳನ್ನೆಲ್ಲ ಹಿಮ್ಮೆಟ್ಟಿಸಿದ್ದು ಸೋಜಿಗವೇ.

ತರುಣರ ದಾಳಿ ಹೆಚ್ಚಾದಂತೆ ಪೇಸ್ ರ್‍ಯಾಂಕಿಂಗ್ ಕುಸಿಯುತ್ತಿದೆ. ಸದ್ಯಕ್ಕೆ ಪೇಸ್ ರ್‍ಯಾಂಕ್ 70.ನಿವೃತ್ತಿಯ ಬಳಿಕವೂ ಬ್ಯುಸಿ ಆಗಿರುವುದು ಪೇಸ್ ನಿರ್ಧಾರ. ಟೆನಿಸ್ ಮತ್ತು ಫುಟ್‌ಬಾಲ್ ಪಂದ್ಯಗಳಿಗೆ ಕಾಮೆಂಟರಿ ನೀಡುವತ್ತ ಪೇಸ್ ಒಲವಿದೆಯಂತೆ. ಜೊತೆಗೆ ಕಾರ್ಪೊರೇಟ್ ಕಂಪನಿಗಳ ನೌಕರರಿಗೆ ವ್ಯಕ್ತಿತ್ವ ವಿಕಸನ ತರಗತಿ ತೆಗೆದುಕೊಳ್ಳುವ ಉದ್ದೇಶವಿದೆಯಂತೆ. ಪೇಸ್ ಹವ್ಯಾಸಿ ಗಾಲ್ಫ್ ಆಟಗಾರ ಕೂಡಾ ಆಗಿರುವುದರಿಂದ ಸೋಮಾರಿಯಂತೂ ಆಗಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65